

ಹವಾಮಾನ ಅಧಿಕಾರಿ: ಲೋ ವೆಂಕಟೇಶ ನಾನು ಹೊರಡ್ತೀನಿ. ಆಫೀಸ್ ಮುಚ್ಚಿ ಮನೆಗೆ ಹೋಗುವಾಗ ಎಲ್ಲಾ ಕಿಟಕಿಗಳನ್ನೂ ಮುಚ್ಚಿಹೋಗು, ತಿಳೀತಾ?

ವೆಂಕಟೇಶ: ಯಾಕೆ ಸಾರ್?

ಹವಾಮಾನ ಅಧಿಕಾರಿ: ಈ ದರಿದ್ರ ಮಳೆ ಯಾವಾಗ ಬರುತ್ತೋ ಒಂದೂ ಗೊತ್ತಾಗೋದಿಲ್ಲ. ಅದಕ್ಕೆ ಹೇಳಿದೆ.

★★★

ಗುಂಡ: ಡಾಕ್ಟ್ರೇ ನನ್ನ ಕಾಲಿನ ಮೂಳೆ ಮುರಿದು ಹೋಗಿದೆಯಾ? ಅದು ಸರಿ ಹೋಗಬೇಕಾದರೆ ಏನು ಮಾಡ್ತೀರಾ?

ವೈದ್ಯ: ಆಪರೇಷನ್ ಮಾಡಬೇಕು.

ಗುಂಡ: ಅಯ್ಯೋ ದೇವರೇ ಮೊದಲೇ ಮುರಿದು ಹೋಗಿದೆ. ಮತ್ತೆ ಅದಕ್ಕೆ ಆಪರೇಷನ್ ಮಾಡಬೇಕಾ?

★★★

ತಂದೆ: ಏನೋ ನೀನು ನಿನ್ನೆ ಜ್ವರದಿಂದ ಬಳಲುತ್ತಿರುವ ನಿನ್ನ ಫ್ರೆಂಡ್ ಮನೆಗೆ ಹೋಗಿ ಅವನ ಪಕ್ಕ ಮಲಗಿದ್ದೆಯಾ? ಆಶ್ಚರ್ಯ.

ಮಗ: ಇದರಲ್ಲಿ ಆಶ್ಚರ್ಯವೇನಿದೆ ಅಪ್ಪಾ!

ತಂದೆ: ಹೌದಪ್ಪ! ಜ್ವರದಂತೆ ಅವನ ಒಳ್ಳೆಯ ಬುದ್ಧಿ ನಿನಗೇಕೆ ಬರಲಿಲ್ಲವೋ?

★★★

ಗುಂಡ: ನಮ್ಮದು ಜಾಯಿಂಟ್ ಫ್ಯಾಮಿಲಿ ಸಾರ್.

ರಾಯರು: ವೆರಿಗುಡ್ ಈ ಕಾಲದಲ್ಲೂ ಜಾಯಿಂಟ್ ಫ್ಯಾಮಿಲಿ ಅಂದ್ರೆ ತುಂಬಾ ಆಶ್ಚರ್ಯವಾಗುತ್ತದೆ. ಅಂದ ಹಾಗೆ ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದೀರಿ? ಎಷ್ಟು ಜನರಿದ್ದೀರಿ?

ಗುಂಡ: ಇಬ್ಬರು. ನಾನು, ನನ್ನ ಹೆಂಡತಿ!

★★★

ಪಕ್ಕದ ಮನೆಯಾಕೆ: ನಿಮ್ಮ ಯಜಮಾನರು ಎಲ್ಲಿಗೆ ಹೋಗಿದ್ದಾರೆ?

ಗುಂಡನ ಹೆಂಡತಿ: ತೀರ್ಥಯಾತ್ರೆಗೆ.

ಪಕ್ಕದ ಮನೆಯಾಕೆ: ಅರೆ ಯಾವಾಗ ಹೋದರು?

ಗುಂಡನ ಹೆಂಡತಿ: ಸಾಯಂಕಾಲ ಆರು ಗಂಟೆಗೆ.

ಪಕ್ಕದ ಮನೆಯಾಕೆ: ಯಾವಾಗ ಬರುತ್ತಾರೆ?

ಗುಂಡನ ಹೆಂಡತಿ: ರಾತ್ರಿ ಹತ್ತು ಗಂಟೆಗೆ.

★★★

ಪೊಲೀಸ್: ಏನ್ರೀ ಸ್ಕೂಟರಿನ ಮೇಲೆ ನಾಯಿ ಕೂರಿಸಿಕೊಂಡು ಹೋಗ್ತಾ ಇದೀರಾ? ಅದಕ್ಕೆ ಲೈಸೆನ್ಸ್ ಮಾಡಿಸಿದ್ದೀರಾ?

ಗುಂಡ: ಇಲ್ಲಾ ಸಾರ್.

ಪೊಲೀಸ್: ಯಾಕೆ ಮಾಡಿಸಿಲ್ಲ?

ಗುಂಡ: ಅದಕ್ಕೆ ಸ್ಕೂಟರ್ ಓಡಿಸೋಕೆ ಬರಲ್ಲ ಸಾರ್!

★★★

ಗೆಳೆಯ: ಕೇಳಿದಿಯೇನೋ ಗುಂಡ! ಕೇವಲ ಒಂದು ರಸಗುಲ್ಲ ಕಾರಣದಿಂದ ಕಿತ್ತಾಟವಾಗಿ ಮದುವೆಯೇ ರದ್ದಾಯಿತಂತೆ.

ಗುಂಡ: ಅರೆ ಹೌದಾ? ಒಂದು ರಸಗುಲ್ಲ ಒಬ್ಬ ಯುವಕನ ಬದುಕನ್ನೇ ಉಳಿಸುವಷ್ಟು ಕೆಲಸ ಮಾಡಿದೆಯಾ?

★★★

ತಂದೆ: ನಿನ್ನ ರಿಸಲ್ಟ್ ನಾಳೆ ಅಲ್ವೇನೋ?

ಮಗ: ಹೌದಪ್ಪ.

ತಂದೆ: ಈ ಸಲ ಫೇಲಾದ್ರೆ ತಿಳಿದುಕೋ ನನಗೂ ನಿನಗೂ ಯಾವ ಸಂಬಂಧವೂ ಇರುವುದಿಲ್ಲ.

ಮಗ: ಹಾಗೇ ಆಗಲಿ ಅಪ್ಪ.

ತಂದೆ: (ಮಾರನೆಯ ದಿನ) ಏನಾಯ್ತೋ ನಿನ್ನ ರಿಸಲ್ಟ್?

ಮಗ: ಯಾರ್ರೀ ನೀವು ಕೇಳೋಕೆ?

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ



ಶ್ರೀ ಸಾಯಿಬಾಬ ಉಪಾಸಕರು

ಕೇವಲ 5 ದಿನದಲ್ಲಿ

100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460